**ದಿನಾಂಕಃ 19.02.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಭೋದಿಸಲಾಯಿತು.**

**ಮುಂದುವರಿದ ಪಾಟೀಸವಾಲುಃ ವಾದಿಪರ ವಕೀಲರಾದ ಶ್ರೀ ಹೆಚ್. ಪಿ. ಎಮ್ ಅವರಿಂದ–**

**15.** ದಾವ ಸರ್ವೇ ನಂಬರ್ **24**ರಲ್ಲಿ ಒಟ್ಟು **8** ಎಕರೆ **6**ಗುಂಟೆ ಇರಬಹುದು ಅದರ ಪೈಕಿ ನನ್ನ ಹೆಸರಿನಲ್ಲಿ **1** ಎಕರೆ **9** ಗುಂಟೆ ಇದೆ. ಸದರಿ **1** ಎಕರೆ **9**ಗುಂಟೆ ಈಗಲೂ ಸಹ ನನ್ನ ಹೆಸರಿನಲ್ಲಿದೆ ಎಂದರೆ ಸರಿ, ಅದೇ ಈ ದಾವ ಸ್ವತ್ತು ಎಂದರೆ ಅದನ್ನು ಅವರು ಸೇರಿಸಿಕೊಂಡಿದ್ದಾರೆ.

**16.** ದಿಃ **25.09.2014**ರಲ್ಲಿ ದಾವ ಕ್ರಯದ ಕರಾರು ಪತ್ರ ಬರೆದುಕೊಡುವ ಸಮಯದಲ್ಲಾಗಲಿ ಅಥವ ವಾದಿ ನನಗೆ ಸದರಿ ಕ್ರಯದ ಕರಾರು ಸಂಬಂಧ ಜಾರಿ ಮಾಡಿದ ನಿಪಿ.**6**ರ ನೋಟೀಸ್ ನಾನು ನೀಡಿದ ಜವಾಬು ನೋಟೀಸ್ ನಲ್ಲಾಗಲಿ ಸದರಿ ಸ್ವತ್ತಿನ ಸಂಬಂಧ ಸಿವಿಲ್ ನ್ಯಾಯಾಲಯದಲ್ಲಿ ಪ್ರಕರಣ ವಿಚಾರಣೆಗೆ ಬಾಕಿ ಇದೆ ಎಂದು ಹೇಳಿದ್ದೆ ಎಂದು ನುಡಿದು, ಇರಬಹುದು ಎಂದು ನುಡಿಯುತ್ತಾರೆ.

17. ದಾವ ಸರ್ವೇ ನಂಬರ್ 24ಕ್ಕೆ ಸಂಬಂಧಪಟ್ಟಂತೆ ನಾನು ಒಂದು ಮೇಲ್ಮನವಿಯನ್ನು ಗೌರಾವನ್ವಿತ ಉಚ್ಚ ನ್ಯಾಯಾಲಯದಲ್ಲಿ ಸಲ್ಲಿಸಿದ್ದು ಅದು ವಿಚಾರಣೆಗೆ ಬಾಕಿ ಇದೆ ಎಂದರೆ ಸರಿ. ಶಾರದಮ್ಮ ನವರು ಸಲ್ಲಿಸಿದ್ದ O.S.121/2018ರ ದಾವೆ ವಾದಿ ಪರವಾಗಿ ಮತ್ತು ನನ್ನ ವಿರುದ್ಧ ತೀರ್ಮಾನವಾಗಿದೆ ಎಂದರೆ ಅದರ ವಿರುದ್ಧ ನಾನು ಅಪೀಲು ಸಲ್ಲಿಸಿದ್ದೇನೆ.

18. ನಾನು ವಾದಿಗೆ ರೂ.7 ಲಕ್ಷ ಹಣವನ್ನು ಪಾವತಿ ಮಾಡಿದ್ದೇನೆ ಎಂದು ಹೇಳಿದ್ದ ಬಗ್ಗೆ ನನ್ನ ಲಿಖಿತ ತಕರಾರಿನಲ್ಲಿ ಒಂದು ತರಹದ ಹೇಳಿಕೆ, ಪೋಲೀಸರ ಮುಂದೆ

ವಿಚಾರಣೆ ನೀಡುವಾಗ ನೀಡಿರುವ ಹೇಳಿಕೆ, ಮತ್ತು ನಾನು ನೀಡಿರುವ ಜವಾಬು ನೋಟೀಸ್ ನಲ್ಲಿ ಒಂದು ತರಹದ ಹೇಳಿಕೆ ನೀಡಿರುತ್ತೇನೆ ಎಂದರೆ ಸುಳ್ಳು. ನಾನು ಇಂಡಿಯನ್ ಓವರಿಸೀಸ್ ಹಾಗೂ ಎಸ್.ಬಿ.ಐ ಬ್ಯಾಂಕಿನಿಂದ ಹಣ ಡ್ರಾ ಮಾಡಿ ವಾದಿಯರಿಗೆ ನೀಡಿರುತ್ತೇನೆ ಎಂದು ಹೇಳಿಕೆಯಲ್ಲಿ ನುಡಿದಿದ್ದೇನೆ ಎಂದರೆ ಸರಿ. ಆದರೆ ನಾನು ಹಾಜರುಪಡಿಸಿರುವ ಇಂಡಿಯನ್ ಓವರಿಸೀಸ್ ಬ್ಯಾಂಕ್ ನ ಸ್ಟೇಟ್ಮೆಂಟ್ ಆಫ್ ಅಕೌಂಟ್ ನಲ್ಲಿ ಅಂತಹ ಯಾವುದೇ ಡ್ರಾ ಮಾಡಿರುವ ನಮೂದು ಇಲ್ಲ ಕೇವಲ ರೂ.500/- ನಮೂದು ಮಾತ್ರ ಕಾಣುತ್ತಿದೆ ಎಂದರೆ ಸಾಕ್ಷಿ ನಾನು ಹೊಗೆಸೊಪ್ಪು ಬಿಟ್ಟಿರುವ ಹಣ ಡ್ರಾ ಮಾಡಿಕೊಂಡಿದ್ದೆ ಆದರೆ ಅದರ ಎಂಟ್ರಿ ಒಂದು ತಿಂಗಳು ತಡವಾಗಿ ಮಾಡಿದ್ದಾರೆ ಎಂದು ನುಡಿಯುತ್ತಾರೆ. ದಿಃ10.08.2015 ರಿಂದ 28.11.2015ರ ನಡುವೆ ನಾನು ಹೇಳುತ್ತಿರುವಂತಹ ಯಾವುದೇ ಹಣದ ಎಂಟ್ರಿ ಇರುವುದಿಲ್ಲ ಎಂದರೆ ಸುಳ್ಳು, ನಾನು ಹಣ ತೆಗೆದುಕೊಂಡಿದ್ದೇನೆ ಬ್ಯಾಂಕಿನವರು ಎಂಟ್ರಿ ಮಾಡಿದ್ದಾರೋ ಇಲ್ಲವೋ ನನಗೆ ಗೊತ್ತಿಲ್ಲ. ನಾನು ಹೇಳುತ್ತಿರುವಂತಹ ಎಸ್.ಬಿ.ಐ ಬ್ಯಾಂಕಿನ ಖಾತಾ ಎಕ್ಸ್ಟ್ರಾಕ್ಟ್ ಹಾಜರುಪಡಿಸಲು ನನಗೆ ತೊಂದರೆ ಇರುವುದಿಲ್ಲ.

19. ನಾನು ನ್ಯಾಯಾಲಯದ ಮುಂದೆ ಹಾಜರುಪಡಿಸಿರುವ ನೀಡಿರುವ ನಿಡಿ.16ರ ಹೇಳಿಕೆ ಪೋಲೀಸರ ಮುಂದೆ ನೀಡಿರುತ್ತೇನೆ ಎಂದರೆ ಸರಿ. ನಿಡಿ.16ರಲ್ಲಿ ತಿಳಿಸಿರುವ ಹಣದ ನೀಡಿಕೆಯ ವಿಚಾರದ ಬಗ್ಗೆ ನಾನು ಯಾವುದೇ ದಾಖಲಾತಿಗಳನ್ನು ಹಾಜರುಪಡಿಸಿರಲಿಲ್ಲ ಎಂದರೆ ಪೋಲೀಸರು ಕೇಳಿಲ್ಲ ಆದ್ದರಿಂದ ಕೊಟ್ಟಿಲ್ಲ, ನ್ಯಾಯಾಲಯದಲ್ಲಿ ಹಾಜರುಪಡಿಸಿರುತ್ತೇನೆ. ನಾನು ಹೇಳುತ್ತಿರುವಂತಹ ಯಾವುದೇ ದಾಖಲಾತಿಯನ್ನು ನ್ಯಾಯಾಲಯಕ್ಕೂ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ.

**20.** ದಿಃ **25.09.2014**ರಂದು ನಾನು ವಾದಿಯನ್ನು ಭೇಟಿ ಮಾಡಿ ನನ್ನ ದರದು ನಿಮಿತ್ತ ದಾವ ಷೆಡ್ಯೂಲ್ ಸ್ವತ್ತನ್ನು ರೂ.**5**ಲಕ್ಷಗಳಿಗೆ ಮಾರಾಟ ಮಾಡಲು ಒಪ್ಪಿ ಮುಂಗಡ ರೂ.**3,25,000/-** ಗಳನ್ನು ಸಾಕ್ಷಿಗಳ ಮತ್ತು ನೋಟರಿಯವರ ಸಮಕ್ಷಮ ಪಡೆದುಕೊಂಡು ನಿಪಿ.1ರ ಕ್ರಯಕರಾರು ಪತ್ರಕ್ಕೆ ಸಹಿ ಮಾಡಿ ಕೊಟ್ಟಿದ್ದೇನೆ ಎಂದರೆ ಸುಳ್ಳು.

**21.** ಬಾಕಿ ರೂ.**1,75,000/-** ಗಳನ್ನು ನಾನು ಪಡೆದುಕೊಂಡು ದಾವ ಸ್ವತ್ತಿನ ಕ್ರಮವಾದ ಕ್ರಯ ಪತ್ರವನ್ನು ಬರೆದುಕೊಡುತ್ತೇನೆ ಎಂದು ವಾದಿಗೆ ಆಶ್ವಾಸನೆ ಕೊಟ್ಟಿದ್ದೆ ಎಂದರೆ ಸುಳ್ಳು. ಆ ನಂತರ ನನಗೆ ಪುನಃ ಹಣದ ಅವಶ್ಯಕತೆ ಇದೆ ಎಂದು ನಾನು ವಾದಿಯನ್ನು ಕೇಳಿದಾಗ ವಾದಿ ತಮಗೆ ಸಂಬಂಧಪಟ್ಟ ರೂ.**1,20,000/-** ಗಳ ಒಂದು ಚೆಕ್ ಅನ್ನು ನೀಡಿದ್ದು, ಸದರಿ ಚೆಕ್ ಅನ್ನು ನಾನು ನಗದೀಕರಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ ಎಂದು ನುಡಿದು ನನ್ನ ಮಗನ ಕೆಲಸದ ಸಂಬಂಧ ಫಿಸಿಕಲ್ ಟೆಸ್ಟ್ ಗಾಗಿ ಸದರಿ ಚೆಕ್ ಹಣವನ್ನು ಡ್ರಾ ಮಾಡಿ ಮತ್ತು 100ಗ್ರಾಂ ಚಿನ್ನವನ್ನು ವಾದಿಗೆ ನೀಡಿರುತ್ತೇನೆ ಎಂದು ನುಡಿಯುತ್ತಾರೆ. ಈಗ ಹೇಳಿದ ರೂ.1,20,000/- ಗಳ ಚೆಕ್ ಅನ್ನು ನಾನೇ ಬ್ಯಾಂಕಿಗೆ ಹೋಗಿ ಡ್ರಾ ಮಾಡಿ ತಂದಿದ್ದೆ ಎಂದರೆ ಸರಿ. ಸದರಿ ಹಣವನ್ನು ನಾನು ವಾದಿಗೆ ವಾಪಸ್ಸು ನೀಡಿದ್ದೇನೆ ಎಂದು ತೋರಿಸಲು ನಾನು ನ್ಯಾಯಾಲಯಕ್ಕೆ ಯಾವುದೇ ದಾಖಲಾತಿಗಳನ್ನು ಹಾಜರುಪಡಿಸಿಲ್ಲ ಎಂದರೆ ದಾಖಲಾತಿ ಇದೆ ಹಾಜರುಪಡಿಸಿರುತ್ತೇನೆ ಎನ್ನುತ್ತಾರೆ.

**22.** ದಿಃ **02.05.2015**ರಂದು ನಾನು ಪುನಃ ವಾದಿಯಿಂದ ರೂ.**25,000/-** ಗಳನ್ನು ಪಡೆದುಕೊಂಡಿದ್ದೆ ಎಂದರೆ ಸುಳ್ಳು. ಈ ಎಲ್ಲದಕ್ಕೂ ನಾನು ಹಣಸಂದ ರಶೀದಿಯನ್ನು ಬರೆದುಕೊಟ್ಟಿದ್ದೆ ಎಂದರೆ ಸುಳ್ಳು. ವಾದಿಗೆ ನಾನು ಕ್ರಯದ ಕರಾರು ಪತ್ರವನ್ನು ಬರೆದುಕೊಟ್ಟು ಮುಂಗಡ ಹಣವನ್ನು ಪಡೆದುಕೊಂಡಿದ್ದಾಗ್ಯೂ ವಾದಿ ನನಗೆ ನೀಡಿದ ನೋಟೀಸ್ ಗೆ ಅಸಂಬದ್ಧ ಉತ್ತರವನ್ನು ನೀಡಿರುತ್ತೇನೆ ಎಂದರೆ

ಸರಿಯಲ್ಲ. ಈಗ ನನಗೆ ತೋರಿಸಿದ ದಿಃ 25.02.2024ರ ವಕಾಲತ್ ನಲ್ಲಿರುವ ಸಹಿ ನನ್ನದೆ ಆಗಿದೆ ಸದರಿ ವಕಾಲತ್ ಅನ್ನು ನಿಪಿ.8ಎಂದು ಸಾಕ್ಷಿಯ ಸಹಿಯನ್ನು ನಿಪಿ.8(ಎ)ಎಂದು ಗುರುತಿಸಲಾಯಿತು. ನಾನು ವಾದಿಯಿಂದ ಹಣ ಪಡೆದು ಅವರಿಗೆ ನಿಪಿ.1ರ ಕ್ರಯದ ಕರಾರು ಪತ್ರ ಬರೆದುಕೊಟ್ಟಿದ್ದರೂ ಕೂಡ ಈಗ ಅವರಿಗೆ ಮೋಸ ಮಾಡುವ ಉದ್ದೇಶದಿಂದ ಬರೆದುಕೊಟ್ಟಿಲ್ಲ ಎಂದು ಕಟ್ಟುಕತೆ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

23. ಈ ಹಂತದಲ್ಲಿ ಸಾಕ್ಷಿಗೆ ಅವರು ಈ ದಾವದಲ್ಲಿ ಸಲ್ಲಿಸಿರುವ ಲಿಖಿತ ಹೇಳಿಕೆ ಮೇಲಿರುವ ಸಹಿಯನ್ನು ದಾಖಲೆಯ ಮೆಲ್ಭಾಗವನ್ನು ಕಾಣದಂತೆ ಅದರ ಮೇಲೆ ಇನ್ನೊಂದು ದಾಖಲೆ ಇಟ್ಟು ಇದು ಯಾರ ಸಹಿ ಎಂದು ಕೇಳಿದಾಗ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿದು, ಪ್ರತಿವಾದಿ ಪರ ವಕೀಲರು ಈ ಬಗ್ಗೆ ತಕರಾರು ಮಾಡಿದ್ದರಿಂದ ಮೇಲ್ಲಿಟ್ಟಿರುವ ದಾಖಲೆಯನ್ನು ತೆಗೆದು ಪೂರ್ಣ ದಾಖಲೆಯನ್ನು ಸಾಕ್ಷಿಗೆ ತೋರಿಸಿ ಪ್ರಶ್ನೆ ಕೇಳಿ ಎಂದು ನ್ಯಾಯಾಲಯವು ನುಡಿದಂತೆ ವಾದಿಪರ ವಕೀರಲು ಸದರಿ ಸಹಿ ಇರುವ ಸಂಪೂರ್ಣ ಲಿಖಿತ ಹೇಳಿಕೆಯನ್ನು ಸಾಕ್ಷಿಗೆ ತೋರಿಸಿ ಕೇಳಿದಾಗ ಅದು ನಾನು ಮಾಡಿರುವ ಸಹಿ ಎಂದು ಸಾಕ್ಷಿ ನುಡಿದಿದ್ದಾರೆ. ನಾನು ಅನ್ಯಾಯದ ಫಾಯಿದೆ ಹೊಂದಲು ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.,

(ಜೈಬುನ್ನಿಸಾ)
ಪ್ರಧಾನ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.